ಚುಟುಕು ಸುದ್ದಿ

ಬಸ್ ತಂಗುದಾಣ ನಿರ್ಮಿಸಲು ಎಬಿವಿಪಿಯಿಂದ ಆಗ್ರಹ

ಮಂಗಳೂರು: ನಗರದ ಹಂಪನಕಟ್ಟೆಯಲ್ಲಿ ಇದ್ದ ಬಸ್ ತಂಗುದಾಣವನ್ನು ಮಂಗಳೂರು ಮನಪಾ ಕಳೆದ ಮೂರು ವಾರಗಳ ಹಿಂದೆ ತೆರವುಗೊಳಿಸಿದ್ದು, ಇದರಿಂದ ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ ಸಮಸ್ಯೆಯಾಗುತ್ತಿದೆ. ಆದ್ದರಿಂದ ಮತ್ತೆ ಅದೇ ಸ್ಥಳದಲ್ಲಿ ಬಸ್ ತಂಗುದಾಣ ನಿರ್ಮಿಸಬೇಕೆಂದು ಆಗ್ರಹಿಸಿ ಎಬಿವಿಪಿ ವತಿಯಿಂದ ಸೋಮವಾರ ಪ್ರತಿಭಟನೆ ನಡೆಯಿತು.

ಬಸ್ ತಂಗುದಾಣ ನಿರ್ಮಾಣದ ಬಗ್ಗೆ ಅಧಿಕಾರಿಗಳಿಗೆ ಸತತವಾಗಿ ಮನವಿ ಮಾಡಿದರೂ ಯಾವುದೇ ಸ್ಪಂದನೆ ಸಿಕ್ಕಿಲ್ಲ . ತಹಶೀಲ್ದಾರ್ ಅವರು ಒಂದು ವಾರದಲ್ಲಿ ಸಮಸ್ಯೆ ಬಗೆಹರಿಸುವ ಭರವಸೆ ನೀಡಿದ್ದರು. ಆದರೆ ಇನ್ನೂ ಬಸ್ ನಿಲ್ದಾಣ ಆಗಿಲ್ಲ ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಎಬಿವಿಪಿ ಮಂಗಳೂರು ವಿಭಾಗ ಸಂಘಟನಾ ಕಾರ್ಯದರ್ಶಿ ಚಂದ್ರಶೇಖರ ಮರಾಠಿ, ಜಿಲ್ಲಾ ಸಂಚಾಲಕ್ ಸುವಿತ್ ಶೆಟ್ಟಿ, ಸಹ ಸಂಚಾಲಕ್ ಪ್ರತೀಕ್ ಬಂಟ್ವಾಳ, ನಗರ ಕಾರ್ಯದರ್ಸಿ ಮೋನಿಷ್ ತೂಮಿನಾಡು, ಕಾರ್ಯಕರ್ತರಾದ ಲಕ್ಷ್ಮೀ ವೈಭವ್ ಆಚಾರ್ಯ, ಶಶಾಂಕಂ ಶೆಟ್ಟಿ, ಅಕ್ಷತಾ, ರಂಜನ್, ಸಿಂಚನಾ, ಹರ್ಷಿತ್, ಚಿರಾಗ್, ದರ್ಶನ್, ಚೇತನ್ ಮಾರುತಿ ಮತ್ತಿತರರು ಉಪಸ್ಥಿತರಿದ್ದರು.

ರೇಷನ್ ಕಾರ್ಡ್ ರದ್ದು ಸಲ್ಲ

ಉಡುಪಿ:ಜಿಲ್ಲೆಯಲ್ಲಿ ರೇಷನ್ ಕಾರ್ಡುಗಳನ್ನು ರದ್ದು ಮಾಡಲು ರೇಷನ್ ಅಂಗಡಿಗಳ ಮುಂದೆ ನೋಟಿಸು ಹಾಕಿರುವುದಾಗಿ ಜನರಿಂದ ದೂರು ಬಂದಿದ್ದು, ಜಿಲ್ಲಾಡಳಿತ ಮತ್ತು ಸರಕಾರ ಕೂಡಲೇ ನಿಜ ಸಂಗತಿಯನ್ನು ಜನರಿಗೆ ವಿವರಿಸಬೇಕೆಂದು ಸಿಪಿಐ(ಎಂ) ಉಡುಪಿ ಜಿಲ್ಲಾ ಸಮಿತಿ ಆಗ್ರಹಿಸಿದೆ.

ಬಡ ಮತ್ತು ಕೆಳ ಮಧ್ಯಮ ವರ್ಗದ ಬಿಪಿಎಲ್ ಕಾರ್ಡುಗಳನ್ನು ರದ್ದು ಮಾಡಿದ್ದೇ ಆದಲ್ಲಿ ಸಿಪಿಐ (ಎಂ), ಇತರ ಸಮಾನ ಮನಸ್ಕ ಸಂಘಟನೆಗಳೊಂದಿಗೆ ಸೇರಿ ಹೋರಾಟ ನಡೆಸುವುದು ಅನಿವಾರ್ಯವಾಗುತ್ತದೆ.

1.20 ಲಕ್ಷ ಆದಾಯದ ಅರ್ಹತೆ ತೀರಾ ಹಿಂದೆ ನಿಗದಿಯಾಗಿದ್ದು, ಈಗ ಅದನ್ನು ಹೆಚ್ಚಿಸುವ ಅಗತ್ಯ ಇದೆ. ಕೆಲವರು ಮನೆ ಕಟ್ಟಲು ಬ್ಯಾಂಕಿನಿಂದ ಸಾಲ ಪಡೆಯುವ ಉದ್ದೇಶದಿಂದ ತಾತ್ಕಾಲಿಕವಾಗಿ ಆದಾಯ ಹೆಚ್ಚು ತೋರಿಸುತ್ತಾರೆ. ಅದನ್ನು ಬಿಪಿಎಲ್ ಕಾರ್ಡ್ ವಿತರಣೆಗೆ ಪರಿಗಣಿಸಬಾರದು ಎಂದು ಸಿಪಿಐ (ಎಂ) ಒತ್ತಾಯಿಸುತ್ತದೆ. ಯಾವುದೇ ಕಾರಣಕ್ಕೂ ಅರ್ಹರ ಬಿಪಿಎಲ್ ಕಾರ್ಡುಗಳನ್ನು ರದ್ದು ಮಾಡಬಾರದು ಎಂದು ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ ಒತ್ತಾಯಿಸಿದ್ದಾರೆ.

ಹಬ್ಬದ ಋತುವಿನಲ್ಲಿ ವಿಶೇಷ

ಮಂಗಳೂರು: ಈ ಹಬ್ಬದ ಋತುವಿಗೆ ಒಪ್ಪೋ ಇಂಡಿಯಾ ಒಪ್ಪೋ ರೆನೋ 12ಪ್ರೊ 5ಜಿ ಮನಿಷ್ ಮಲ್ಹೋತ್ರಾ ಎಡಿಷನ್ ಬಿಡುಗಡೆ ಮಾಡಿದ್ದು ಇದು ದೇಶದ ಉಜ್ವಲ ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ಸಂಭ್ರಮಿಸಲು ಪರಿಪೂರ್ಣ ಸ್ಮಾರ್ಟ್‌ಫೋನ್ ಆಗಿದೆ.

ಮನಿಷ್ ಮಲ್ಹೋತ್ರಾ ಅವರ ಪ್ರತಿಮಾತ್ಮಕ ವರ್ಲ್ಡ್ ಕಲೆಕ್ಷನ್‌ನಿಂದ ಸ್ಫೂರ್ತಿ ಪಡೆದ ಈ ಸ್ಪೆಷಲ್ ಎಡಿಷನ್ ದೇಶದ ವಿನ್ಯಾಸದ ಪರಂಪರೆಯ ಸಮೃದ್ಧಿಯನ್ನು ಸೊಗಸಾದ ಕಪ್ಪು ಹಿನ್ನೆಲೆಯಲ್ಲಿ ಸೂಕ್ಷ್ಮ ಗೋಲ್ಡ್ ಫಿಲಿಗ್ರೀ ಮತ್ತು ಫ್ಲೋರಲ್ ಎಂಬ್ರಾಯಿಡರಿ ಮೂಲಕ ಬಿಂಬಿಸುತ್ತಿದೆ. ಒಪ್ಪೋದ ಆವಿಷ್ಕಾರಕ ಮೆಟೀರಿಯಲ್ ಡಿಸೈನ್ ಮಲ್ಹೋತ್ರಾ ಅವರ ಸಿಗ್ನೇಚರ್ ಮೊಟಿಫ್ ಗಳೊಂದಿಗೆ ಸಂಯೋಜಿಸಿದ್ದು ಇದು ಭಾರತದ ಹಬ್ಬದ ಸ್ಫೂರ್ತಿಯ ಅತ್ಯಾಕರ್ಷಕ ಸಂಭ್ರಮಾಚರಣೆಯನ್ನು ಐಷಾರಾಮಿ ಮತ್ತು ಕರಕುಶಲತೆಯೊಂದಿಗೆ ತಂದಿದೆ ಎಂದರು.

ಟಿ.ರಾಮಪ್ಪಯ್ಯ ನಿಧನ

ಮಂಗಳೂರು: ನಗರದ ಕದ್ರಿ ನಿವಾಸಿ ತೆಂಕಿಲ ರಾಮಪ್ಪಯ್ಯ (83) ಅವರು ವಯೋಸಹಜ ಅನಾರೋಗ್ಯದಿಂದ ಶನಿವಾರ

ನಿಧನರಾದರು.

ಅವರು ಪತ್ನಿ ರಮಾ, ಮಗಳು ರಶ್ಮಿ, ಪುತ್ರರಾದ ರಾಜೇಶ್ ಹಾಗೂ ರಂಜಿತ್ ಹಾಗೂ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಬೆಂಗಳೂರಿನ ಅಖಿಲ ಭಾರತೀಯ ಸ್ಥಾನಿಕ ಬ್ರಾಹ್ಮಣರ ಸಭಾದ ಕಾರ್ಯಕಾರಿ ಸಮಿತಿ ಸದಸ್ಯರಾದ ಸಿ.ಆರ್. ಸುಬ್ರಹ್ಮಣ್ಯ ಅವರು ರಾಮಪ್ಪಯ್ಯ ಅವರ ಅಳಿಯ.

ನಾಡಹಬ್ಬವನ್ನು ನಡೆಸುವ ಮಂದಿಗಾಗಿ ಹುಡುಕಾಟದ ಪರಿಸ್ಥಿತಿ । 2ನೇ ಬಾರಿಗೆ ಪುತ್ತೂರ ಹಬ್ಬ ಸ್ಥಗಿತ ಸಾಧ್ಯತೆ..!

ಪಾರಂಪರಿಕ ಪುತ್ತೂರು ನಾಡಹಬ್ಬಕ್ಕೆ ಕಪ್ಪುಚುಕ್ಕಿ

ಸಂ.ಕ.ಸಮಾಚಾರ, ಪುತ್ತೂರು

ಪುತ್ತೂರಲ್ಲಿ ನಾಡಹಬ್ಬದ ವೈಭವ ಸಾಂಸ್ಕೃತಿಕ ಪರಂಪರೆಯ ವೈಭವೀಕರಣದ ಹಿನ್ನಲೆಯಲ್ಲಿ ಸಾಹಿತಿ ಡಾ.ಶಿವರಾಮ ಕಾರಂತರು 1931ರಲ್ಲಿ ಪ್ರಾರಂಭಿಸಿದ ಪುತ್ತೂರು ದಸರಾ ನಾಡಹಬ್ಬ 2ನೇ ಬಾರಿಗೆ ಸ್ಥಗಿತಗೊಳ್ಳಲಿದೆ ಎಂಬ ಮಾಹಿತಿ ಲಭ್ಯವಾಗಿದ್ದು, ಈ ವೈಭವದ ಪಾರಂಪರಿಕ ವ್ಯವಸ್ಥೆಗೆ ಈ ಬಾರಿ 'ಕಪ್ಪುಚುಕ್ಕಿ' ಇಡುವುದು ಬಹುತೇಕ ಖಚಿತವಾಗಿದೆ.

ನೆಲ್ಲಿಕಟ್ಟೆಯ ಶಾಲೆಯಲ್ಲಿ ಆರಂಭಗೊಂಡ ಈ 'ಪುತ್ತೂರಿನ ಪರ್ಬ'ದಲ್ಲಿ ಸಾಹಿತ್ಯ ಚಿಂತನೆಯನ್ನು ಹಂಚುವ ನಿಟ್ಟಿನಲ್ಲಿ ಮೇಧಾವಿ ವ್ಯಕ್ತಿಗಳನ್ನು ಕರೆಸಿ ಉಪನ್ಯಾಸ ಕೊಡಿಸುವ ಪರಿಪಾಠವನ್ನು ಕಾರಂತರು ಹಳೆಯ ಕಾಲದಲ್ಲಿಯೇ ಆರಂಭ ಮಾಡಿದ್ದರು. ಕೆಲ ವರ್ಷಗಳ ಕಾಲ ಸಂಭ್ರಮದಿಂದ ನಡೆದ ಈ ನಾಡಹಬ್ಬ ಸ್ಥಗಿತಗೊಂಡಿತ್ತು. ಮತ್ತೆ ಇದನ್ನು ಪುನರಾರಂಭಿಸಿದ ಕೀರ್ತಿ ಕಾರಂತರ ಬಾವ ಸದಾಶಿವ ರಾಯರಿಗೆ ಸಲ್ಲುತ್ತದೆ. ಆದರೆ ನೆಲ್ಲಿಕಟ್ಟೆಯಿಂದ ಈ ನಾಡಹಬ್ಬ ಪುತ್ತೂರಿನ ದೇವಳಕ್ಕೆ ಸ್ಥಳಾಂತರಗೊಂಡಿತು. ಬಳಿಕ ಒಂದೆರಡು ವರ್ಷ ಪುತ್ತೂರಿನ ಟೌನ್ ಬ್ಯಾಂಕ್ ಸಭಾಂಗಣದ ಚೌಕಟ್ಟಿಗೆ ಸೀಮಿತಗೊಂಡು ನಡೆಯಿತಾದರೂ ಆಮೇಲೆ ಮತ್ತೆ ಮಹಾಲಿಂಗೇಶ್ವರ ದೇವಳದ ನಟರಾಜ ವೇದಿಕೆಯಲ್ಲಿ ನಿರಂತರವಾಗಿ ನಡೆದುಕೊಂಡು ಬರಲಾರಂಭಿಸಿದೆ.

ಆದರೆ ಈ ಬಾರಿ ಈ ನಾಡಹಬ್ಬವನ್ನು ನಡೆಸುವ ಮಂದಿಗಾಗಿ

ಹುಡುಕಾಟ ನಡೆಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಹಾಗಾಗಿ ಕಾರ್ಯಕ್ರಮ ಆಯೋಜನೆ ಮಾಡುವುದು ಅಸಾಧ್ಯ ಎಂಬ ವಿಚಾರಗಳು ವ್ಯಕ್ತವಾಗುತ್ತಿವೆ. ಸುಮಾರು 7 ದಿನಗಳ ವಿಶೇಷ ಕಾರ್ಯಕ್ರಮಗಳು, ಸಾಂಸ್ಕೃತಿಕ ಮನೋರಂಜನೆ, ಉಪನ್ಯಾಸ ಹೀಗೆ ಕಾರ್ಯಕ್ರಮ ಆಯೋಜನೆಯೂ ಸುಲಭಸಾಧುವಲ್ಲ. ಆದರೆ ಐತಿಹಾಸಿಕ ಪರಂಪರೆಯೊಂದನ್ನು ಹುಟ್ಟು ಹಾಕಿದ ಡಾ.ಕಾರಂತರ ಆಶಯಕ್ಕೆ ಈ ಕಾರ್ಯಕ್ರಮ ಸ್ಥಗಿತ ವಾಗುವ ಮೂಲಕ ನಾಡಹಬ್ಬದ ಮೆರುಗಿಗೆ ಅಪಮಾನವಾಗುವ ಸಾಧ್ಯತೆಯಾಗಿದೆ. ಹಾಗಾಗಿ ನಾಡಹಬ್ಬ ನಿಲ್ಲಿಸುವ ಪ್ರಶ್ನೆ ಇಲ್ಲವೇ ಇಲ್ಲ ಎಂಬ ಧ್ವನಿಯೂ ಹಿರಿಯ ಸಾಹಿತಿಗಳಿಂದ ವ್ಯಕ್ತವಾಗಿದೆ.

ಮುಂದೂಡಲಾಗಿದೆಯಾ..!

ದಸರಾ ನಾಡಹಬ್ಬ ಆಚರಣೆ ದಸರಾ ಸಂದರ್ಭವೇ ಆಗಬೇಕು. ಆದರೆ ಇದನ್ನು ಮುಂದೂಡಲಾಗುತ್ತದೆ ಎಂಬ ಅಭಿಪ್ರಾಯಗಳೂ ಕೆಲವರಿಂದ ವ್ಯಕ್ತವಾಗುತ್ತಿದೆ.

ಕಾರಂತರ ಇಚ್ಛೆಯ ಈ ನಾಡಹಬ್ಬವನ್ನು ನಡೆಸುವಲ್ಲಿ ಹಿರಿಯರಾದ ಬೋಳಂತಕೋಡಿ, ಮೊಳೆಯಾರ್, ಎನ್.ಸುಬ್ರಹ್ಮಣ್ಯ ಕೊಳತ್ತಾಯ, ಬಿ.ಐತ್ತಪ್ಪ ನಾಯ್ಕ್, ಬಿ.ಪುರಂದರ ಭಟ್, ಪ್ರೊ.ವಿ.ಬಿ.ಅರ್ತಿಕಜೆ, ರಮೇಶ್ ಬಾಬು, ವತ್ಸಲ ರಾಜ್ಞಿ, ಎ.ವಿ.ನಾರಾಯಣ, ಹರಿಣಾನಾಯಣ ಮಾಡಾವು, ಶ್ರೀಗಿರೀಶ್ ಮಳಿ, ಸೀತಾರಾಮ ಶಾಸ್ತ್ರೀ, ಎಂ.ಟಿ.ಜಯರಾಮ್ ಭಟ್, ವಾಟೆಡ್ಕ ಕೃಷ್ಣ ಭಟ್, ಎನ್. ಕೆ.ಜಗನ್ನಿವಾಸ ರಾವ್, ನಟ್ಟೋಜ ಸುಬ್ರಹ್ಮಣ್ಯ ರಾವ್ ಮುಂತಾದವರು ಪ್ರಮುಖ ಪಾತ್ರ ವಹಿಸಿದ್ದಾರೆ. ನಾಡಹಬ್ಬ ಸಮಿತಿ ಅಧ್ಯಕ್ಷರು ಅನಾರೋಗ್ಯದಲ್ಲಿದ್ದ ಕಾರಣ ತಾತ್ಕಾಲಿಕವಾಗಿ ನಾಡಹಬ್ಬ ಮುಂದೂಡಲಾಗುತ್ತಿದೆ ಎಂಬ ಮಾಹಿತಿಯನ್ನು ಸಮಿತಿ ಗೌರವಾಧ್ಯಕ್ಷ ಎನ್.ಕೆ.ಜಗನ್ನಿವಾಸ ರಾವ್ ನೀಡಿದ್ದಾರೆ.

ಡಿಸೆಂಬರ್‌ನಲ್ಲಿ ನಾಡಹಬ್ಬ...!

ಈ ಬಾರಿ ಮಳೆಯ ಅಬ್ಬರ ಜೋರಾಗಿದೆ. ಶ್ರೇಷ್ಠಮಟ್ಟದ ಉಪನ್ಯಾಸ, ಕಲಾವಿದರು ಬಂದಾಗ ಇಲ್ಲಿ ಪ್ರೇಕ್ಷಕವರ್ಗ ಇಲ್ಲವಾದರೆ ಎಲ್ಲರ ಶ್ರಮವೂ ವ್ಯರ್ಥವಾಗುತ್ತದೆ. ಕಾರಂತರ ಆಶಯದ ಈ ಕಾರ್ಯಕ್ರಮವನ್ನು ಮುಂದಿನ ಡಿಸೆಂಬರ್ ನಲ್ಲಿ ನಡೆಸಲಾಗುವುದು ಎಂಬ ಅಭಿಪ್ರಾಯವನ್ನು ದಸರಾ ನಾಡಹಬ್ಬ ಸಮಿತಿ ಅಧ್ಯಕ್ಷ ವಾಟೆಡ್ಕ ಕೃಷ್ಣ ಭಟ್ ಅವರು ತಿಳಿಸಿದ್ದಾರೆ.

> **ಯಾರಾದರೂ ಮುಂದೆ ಬನ್ನಿ...:**
> ಪುತ್ತೂರು ಅನುರಾಗ ವಠಾರದಲ್ಲಿಯ ಕಾರ್ಯಕ್ರಮವೊಂದರಲ್ಲಿ ಪ್ರೊ. ವಿ.ಬಿ.ಅರ್ತಿಕಜೆ ಅವರು ನಾಡಹಬ್ಬ ಇನ್ನಿಲ್ಲ ಎಂಬ ಮಾಹಿತಿಯನ್ನು ಹೊರಗೆಡವಿದ್ದರು. ಪುತ್ತೂರು ದೇವಳದ ನಟರಾಜ ವೇದಿಕೆಯಲ್ಲಿ ನಿರಂತರವಾಗಿ ನಡೆದುಕೊಂಡು ಬರುತ್ತಿದ್ದ ನಾಡಹಬ್ಬ ಇಲ್ಲ ಎಂಬ ವಾರ್ತೆ ನನಗೆ ನೋವು ತಂದಿದೆ. ಕೇವಲ ಒಬ್ಬರನ್ನು ನಂಬಿಕೊಂಡು ಆಚರಣೆ ಮಾಡುವ ಕಾರ್ಯಕ್ರಮ ಇದಲ್ಲ. ಸಮಿತಿಯಲ್ಲಿ ಇರುವವರು ಮುಂದೆ ನಿಂತು ಮಾಡಬೇಕಾಗಿತ್ತು. ಆದರೆ ಯಾರೂ ಮುಂದೆ ಬರದೇ ಇರುವುದೇ ದೊಡ್ಡ ದುರಂತ. ಯಾರಾದರೂ ಮುಂದೆ ಬಂದು ಈ ಕಾರ್ಯಕ್ರಮ ಸ್ಥಗಿತವಾಗದ ಹಾಗೇ ಮಾಡಿದರೆ ತುಂಬಾ ಸಂತೋಷ.
> ▪ ವಿ.ಬಿ.ಅರ್ತಿಕಜೆ । ಸಾಹಿತಿ

ಸಿರಿಬಾಗಿಲು ಪ್ರತಿಷ್ಠಾನಕ್ಕೆ 15 ಲಕ್ಷ ರೂ. ಕೊಡುಗೆ

ಸಂ.ಕ.ಸಮಾಚಾರ, ಉಜಿರೆ

ಶ್ರೀ ಕ್ಷೇತ್ರ ಧರ್ಮಸ್ಥಳ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆಯವರು ಗಡಿನಾಡು ಕಾಸರಗೋಡಿನ ಸಿರಿಬಾಗಿಲು ವೆಂಕಪ್ಪಯ್ಯ ಸಾಂಸ್ಕೃತಿಕ ಪ್ರತಿಷ್ಠಾನದ ಸಾಂಸ್ಕೃತಿಕ ಭವನ ಹಾಗು ತೆಂಕು ತಿಟ್ಟು ಯಕ್ಷಗಾನದ ಬೃಹತ್ ಮ್ಯೂಸಿಯಂನ ಯೋಜನೆಯನ್ನು ಮೆಚ್ಚಿ ಆರಂಭದಲ್ಲಿ ಸಾಂಸ್ಕೃತಿಕ ಭವನ ನಿರ್ಮಾಣಕ್ಕೆ 10 ಲಕ್ಷ ರೂ. ನೆರವು ನೀಡಿದ್ದು, ಇದೀಗ ಮತ್ತೆ ಶ್ರೀ ಮಂಜುನಾಥೇಶ್ವರ ಸ್ವಾಮಿಯ ಪ್ರಸಾದ ರೂಪವಾಗಿ 15 ಲಕ್ಷ ರೂ. ಆರ್ಥಿಕ ನೆರವಿನ ಧನಸಹಾಯ ನೀಡಿ ಹರಸಿರುತ್ತಾರೆ.

ಕಳೆದ ಡಿಸೆಂಬರ್ ತಿಂಗಳಲ್ಲಿ ಸಾಂಸ್ಕೃತಿಕ ಭವನ, ಮ್ಯೂಸಿಯಂ ಲೋಕಾರ್ಪಣೆಗೊಳಿಸಿದ ಡಾ.ಡಿ.ವೀರೇಂದ್ರ ಹೆಗ್ಗಡೆಯವರು ಯಕ್ಷಗಾನ ಕ್ಷೇತ್ರದಲ್ಲಿ ಮುಂದಿನ ದಿನಗಳಲ್ಲಿ ಅಧ್ಯಯನಕ್ಕೆ ಇದೊಂದು ದೊಡ್ಡ ಕೊಡುಗೆಯಾಗಲಿದೆ ಎಂದು ಶುಭ ಹಾರೈಸಿದ್ದರು. ಇತ್ತೀಚೆಗೆ ಶ್ರೀಕ್ಷೇತ್ರ ಧರ್ಮಸ್ಥಳದ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ, ಧರ್ಮಸ್ಥಳ ಮೇಳದ ಯಜಮಾನರಾದ ಡಿ.ಹರ್ಷೇಂದ್ರ ಕುಮಾರ್ ಅವರು ಯಕ್ಷಗಾನ ಮ್ಯೂಸಿಯಂಗೆ ಭೇಟಿ ನೀಡಿ ಇದೊಂದು ಕಲಾ ವಲಯದ ಅದ್ಭುತ ಎಂದು ಶ್ಲಾಘಿಸಿದ್ದರು.

ಪ್ರತಿಷ್ಠಾನದ ಅಧ್ಯಕ್ಷ, ಶ್ರೀಧರ್ಮಸ್ಥಳ ಮೇಳದ ಪ್ರಧಾನ ಭಾಗವತ ರಾಮಕೃಷ್ಣಮಯ್ಯ ಅವರು ಕ್ಷೇತ್ರದಿಂದ ನೀಡಿದ ಆರ್ಥಿಕ ನೆರವಿನ ಸಹಕಾರವನ್ನು ಕೃತಜ್ಞತೆಯಿಂದ ಸ್ವೀಕರಿಸಿದರು. ಪ್ರತಿಷ್ಠಾನದ ಕಾರ್ಯಕರ್ತರಾದ ಪ್ರಸನ್ನ ಕಾರಂತ ದೇಶಮಂಗಲ, ಶ್ರೀಮುಖ ಮಯ್ಯ, ಸಿರಿಬಾಗಿಲು ಉಪಸ್ಥಿತರಿದ್ದರು.



ಕೌನ್ ಬನೇಗಾ ಕರೋಡ್‌ಪತಿ 6.40 ಲಕ್ಷ ಗೆದ್ದ ಅಪೂರ್ವಾ ಶೆಟ್ಟಿ

ಸಂ.ಕ.ಸಮಾಚಾರ, ಮಂಗಳೂರು

ಸೋನಿ ಟಿವಿಯಲ್ಲಿ ಪ್ರಸಾರವಾಗುವ ಕೌನ್ ಬನೇಗಾ ಕರೋಡ್‌ಪತಿ (ಕೆಬಿಸಿ) ಕಾರ್ಯಕ್ರಮದಲ್ಲಿ ಮಂಗಳೂರು ಪಂಪ್‌ವೆಲ್‌ನ ಯುವತಿ ಅಪೂರ್ವಾ ಶೆಟ್ಟಿ 6.40 ಲಕ್ಷ ರೂ. ಬಹುಮಾನ ಗೆದ್ದುಕೊಂಡಿದ್ದಾರೆ. ಅಲ್ಲದೆ ಅವರು ಕಾರ್ಯಕ್ರಮದ ವೇದಿಕೆಯಲ್ಲಿ ತಂದೆ ಮತ್ತು ಮಾವನ ಜತೆ ತುಳುವಿನಲ್ಲೇ ಮಾತನಾಡಿರುವುದಕ್ಕೆ ತುಳುವರಿಂದ ಶ್ಲಾಘನೆ ವ್ಯಕ್ತವಾಗಿದೆ.

ಸೆ.27ರಂದು ರಾತ್ರಿ ಅಪೂರ್ವಾ ಅವರ ಸಂಚಿಕೆ ಪ್ರಸಾರವಾಗಿದೆ. ಅಪೂರ್ವಾ 10 ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ್ದರು. 11ನೇ ಪ್ರಶ್ನೆಯಾಗಿ ಮ್ಯಾನ್ ಗ್ರೋವ್ ಫಾರೆಸ್ಟ್ (ಕಾಂಡ್ಲಾವನ) ಹೆಚ್ಚಿರುವ ದೇಶ ಯಾವುದು? ಪ್ರಶ್ನೆಯನ್ನು ಕೇಳಲಾಗಿತ್ತು. ಬ್ರೆಜಿಲ್, ನೈಜೀರಿಯಾ, ಬಾಂಗ್ಲಾದೇಶ ಹಾಗೂ ಇಂಡೋನೇಶ್ಯಾದ ಆಯ್ಕೆ ನೀಡಲಾಗಿತ್ತು. ಉತ್ತರಿಸಲು ಗೊಂದಲಕ್ಕೀಡಾದ ಅಪೂರ್ವಾ ಉತ್ತರಕ್ಕಾಗಿ ಮಾವನಿಗೆ ಕರೆ ಮಾಡಿದರು. ಅವರೊಂದಿಗೆ ತುಳುವಿನಲ್ಲೇ ಪ್ರಶ್ನೆ ಕೇಳಿದ್ದರು. ಅವರು ನೈಜೀರಿಯಾ ಆಗಿರಬೇಕೆಂದು ಉತ್ತರಿಸಿದ್ದರು. ಆ ಉತ್ತರದ ಬಗ್ಗೆ ಸ್ಪಷ್ಟತೆ ಇಲ್ಲದ ಕಾರಣ, ತಪ್ಪಾಗಿ ಉತ್ತರಿಸಿದರೆ ಹಣ ಕಡಿತವಾಗುವುದರಿಂದ 10 ಪ್ರಶ್ನೆಗಳ ಉತ್ತರಕ್ಕೆ ದೊರಕಿದ್ದ 6.40 ಲಕ್ಷ ರೂ.ಗಳಿಗೇ ಖುಷಿ ಪಟ್ಟು ಸ್ಪರ್ಧೆಯಿಂದ ಹಿಂದೆ ಸರಿದರು.

> **ತುಳುವಿನಲ್ಲೇ ಸಂಭಾಷಣೆ**
> ಸ್ಪರ್ಧೆಯ ವೇಳೆ ಅಪೂರ್ವಾ ಅವರು ಅಮಿತಾಭ್ ಬಚ್ಚನ್ ಅವರಲ್ಲಿ ನನ್ನ ತಂದೆ ನಿಮ್ಮ ದೊಡ್ಡ ಅಭಿಮಾನಿ ಎಂದು ಹೇಳಿದಾಗ ಅಮಿತಾಭ್ ಬಚ್ಚನ್ ಆಕೆಯ ತಂದೆ ಲೋಕನಾಥ್ ಶೆಟ್ಟಿಗೆ ವೀಡಿಯೋ ಕರೆ ಮಾಡಿ ಮಾತನಾಡಿದ್ದಾರೆ. ಆಗ ಲೋಕನಾಥ ಶೆಟ್ಟಿ ಪುತ್ರಿ ಜತೆ ತುಳುವಿನಲ್ಲಿ ಮಾತನಾಡಿ, ತುಳುವಿನ ಮಹತ್ವವನ್ನು ಮೆರೆಸಿದ್ದಾರೆ. ಲೋಕನಾಥ ಶೆಟ್ಟಿ ಅವರು ಅಮಿತಾಭ್ ಜತೆಗೆ ಮಾತನಾಡುತ್ತಾ ಆನಂದಭಾಷ್ಪ ಸುರಿಸಿದ್ದಾರೆ. ಆಗ ಅಪೂರ್ವಾ ಕಣ್ಣಲ್ಲೂ ನೀರು ಬರುವುದನ್ನು ನೋಡಿ ಅಮಿತಾಭ್ ಪೇಪರ್ ಕರ್ಚೀಫ್ ನೀಡಿದ್ದಾರೆ.

ಡಿ.10ರಿಂದ 30ನೇ ವರ್ಷದ ಆಳ್ವಾಸ್ ವಿರಾಸತ್ ಸಡಗರ

ಸಂ.ಕ.ಸಮಾಚಾರ, ಮೂಡುಬಿದಿರೆ

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ಪ್ರತೀ ವರ್ಷ ನಡೆಸಿಕೊಂಡು ಬರುತ್ತಿರುವ ಸಂಸ್ಥೆಯ ಮಹತ್ವಾಕಾಂಕ್ಷೆಯ ರಾಷ್ಟ್ರೀಯ ಸಾಂಸ್ಕೃತಿಕ ಉತ್ಸವ ಆಳ್ವಾಸ್ ವಿರಾಸತ್–2024 ಈ ವರ್ಷ ಡಿಸೆಂಬರ್ 10–15ರ ವರೆಗೆ ಮೂಡುಬಿದಿರೆಯ ವಿದ್ಯಾಗಿರಿಯಲ್ಲಿ ನಡೆಯಲಿದೆ ಎಂದು ವಿರಾಸತ್‌ನ ರೂವಾರಿ, ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ.ಮೋಹನ ಆಳ್ವ ತಿಳಿಸಿದ್ದಾರೆ.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 30ರ ಹರೆಯ ದಲ್ಲಿರುವ ವಿರಾಸತ್‌ನ ಈ ಸಂದರ್ಭದಲ್ಲಿ ಅಪೂರ್ವ ಮತ್ತು ವೈಭವದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಂಘಟಿಸಿ ಸಂಸ್ಕೃತಿ ಪ್ರಿಯರಿಗೆ ರಸದೌತಣವನ್ನು ನೀಡಲು ಯೋಚಿಸಲಾಗಿದೆ. ಇದಕ್ಕಾಗಿ ಈಗಾಗಲೇ ಕಾರ್ಯಪ್ರವೃತ್ತರಾಗಿದ್ದು 'ಆಳ್ವಾಸ್ ವಿರಾಸತ್–2024'ನ್ನು ಅತ್ಯಂತ ಯಶಸ್ವೀ ಉತ್ಸವವಾಗಿಸುವಲ್ಲಿ ಪ್ರಯತ್ನಿಸಲಾಗುತ್ತಿದೆ.

ಆಳ್ವಾಸ್ ವಿರಾಸತ್–2024 ಡಿ.10 ಮಂಗಳವಾರದಂದು ಪ್ರಾರಂಭವಾಗಿ 15ರ ಭಾನುವಾರದಂದು ಮುಕ್ತಾಯಗೊಳ್ಳಲಿದೆ. ಮಂಗಳವಾರ, ಬುಧವಾರ, ಗುರುವಾರ, ಶುಕ್ರವಾರ ಶನಿವಾರ ಮತ್ತು ಭಾನುವಾರಗಳು ಸೇರಿ ಒಟ್ಟು 6 ದಿನಗಳ ಕಾಲ ಈ ಸಾಂಸ್ಕೃತಿಕ ಉತ್ಸವವು ವೈಭವೋಪೇತವಾಗಿ ಜರುಗಲಿದೆ.

ಮೊದಲ 5 ದಿನಗಳು ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿ